


## ನಿಯೊ

ಇದು ಟಾಸ್ಕ್ ನಿರ್ವಹಣೆ ಆ್ಯಪ್. ಐಫೋನ್‌ಗೆ ಹೇಳಿ ಮಾಡಿಸಿದ್ದು. ಇದು ಐಒಎಸ್ ಟಚ್‌ಸ್ಕ್ರೀನ್ ಬಳಸುವುದಲ್ಲದೇ, ಎಡ, ಬಲ, ಮಧ್ಯದ ಜಾಗದಲ್ಲಿ ಆರಾಮವಾಗಿ ಹರಿದಾಡುತ್ತದೆ. ಸ್ವೈಪಿಂಗ್, ಡ್ರ್ಯಾಗಿಂಗ್, ಟ್ಯಾಪಿಂಗ್ ಅನ್ನು ಆರಾಮವಾಗಿ ಮಾಡಬಹುದು. ಎಡಗಡೆ ಸಣ್ಣದಾಗಿ ಸ್ವೈಪ್ ಮಾಡಿದರೆ ಸಂದೇಶ ಕಾಣಿಸಿಕೊಳ್ಳುತ್ತದೆ. ದೀರ್ಘವಾಗಿ ಸ್ವೈಪ್ ಮಾಡಿದರೆ ಆ ಸಂದೇಶವನ್ನು ಫೋಲ್ಡರ್‌ನಲ್ಲಿ ಸೇರಿಸಬಹುದು. ಟಾಸ್ಕ್ ಮೇಲೆ ಸ್ವೈಪ್ ಮಾಡಿದರೆ ವಿವರ ಕಾಣಿಸಿಕೊಳ್ಳುತ್ತದೆ. ಹಾಗೆಯೇ ಟಾಸ್ಕ್ ಅನ್ನು ಎಡಿಟ್ ಕೂಡಾ ಮಾಡಬಹುದು.




## ಮೂವಿಫೋನ್

ಈ ಆ್ಯಪ್ ಮೂಲಕ ಸಿನಿಮಾ ಮಂದಿರದಲ್ಲಿ ಚಿತ್ರಗಳ ಟಿಕೆಟ್ ಖರೀದಿಸಬಹುದು. ಚಿತ್ರದ ನಟ– ನಟಿಯರು, ನಿರ್ದೇಶಕರ ವಿವರ ಕೂಡಾ ದೊರಕುತ್ತದೆ. ಟ್ರೇಲರ್ ಕೂಡಾ ನೋಡಿ ಚಿತ್ರಮಂದಿರದಲ್ಲಿ ನೋಡಬೇಕೋ, ಬೇಡವೋ ಎಂಬುದನ್ನು ನಿರ್ಧರಿಸಬಹುದು. ಇದು ಆ್ಯಂಡ್ರಾಯ್ಡ್ ಮತ್ತು ಐಒಎಸ್ ಫೋನ್‌ಗಳನ್ನು ಸಪೋರ್ಟ್ ಮಾಡುತ್ತದೆ. ವಿಂಡೋಸ್ ಮತ್ತು ಬ್ಲ್ಯಾಕ್‌ಬೆರಿ ವೆಬ್ ಆವೃತ್ತಿ ಬಳಸಬೇಕಾಗುತ್ತದೆ. ಚಿತ್ರಗಳ ರೇಟಿಂಗ್ ನೋಡಲು ಸಾಧ್ಯವಿಲ್ಲ.

## ವಾಟ್ಸ್ ಆ್ಯಪ್ ಮೆಸೆಂಜರ್

ಅಂತರರಾಷ್ಟ್ರೀಯವಾಗಿ ಟೆಕ್ಸ್ಟ್ ಸಂದೇಶ ಕಳಿಸುವುದು ದುಬಾರಿ. ಆದರೆ ವಾಟ್ಸ್ ಆ್ಯಪ್ ಮೆಸೆಂಜರ್‌ನಿಂದ ಅತ್ಯಂತ ಕಡಿಮೆ ಬೆಲೆಯಲ್ಲಿ ಸರಳವಾಗಿ, ಮನಸ್ಸಿಗೆ ತೃಪ್ತಿಯಾಗುವಂತೆ ಸಂದೇಶ ಕಳಿಸಬಹುದು. 40 ಕೋಟಿ ಮಂದಿ ಜಗತ್ತಿನಾದ್ಯಂತ ಇದನ್ನು ಬಳಸುತ್ತಿದ್ದು, ಇದಕ್ಕೆ ನೋಂದಣಿ ಮಾಡಿಸಿಕೊಳ್ಳುವುದು ಸುಲಭ. ನಿಮಗೆ ಸಂದೇಶ ಬಂದಾಗ ನಿಮ್ಮನ್ನು ಎಚ್ಚರಿಸುವ ಕೆಲಸವನ್ನೂ ಮಾಡುತ್ತದೆ. ಸಾಂಪ್ರದಾಯಕ ಸಂದೇಶ ಕಳಿಸುವ ಕೆಲಸವನ್ನು ಇದು ಕಡಿಮೆ ಮಾಡಿದೆ. ಅಂದರೆ ಉದಾಹರಣೆಗೆ ನೀವಿರುವ ಜಾಗವನ್ನು ಗೂಗ್ಲ್ ಮ್ಯಾಪ್‌ನಲ್ಲಿ ಶೇರ್ ಮಾಡಬಹುದು. ಚಿತ, 89 ಸೆಕೆಂಡ್ ಅವಧಿಯ ವಿಡಿಯೊ ಕ್ಲಿಪ್, ಆಡಿಯೊ ಅಂಟಿಸಬಹುದು. ವಿಡಿಯೊ ಚ್ಯಾಟಿಂಗ್‌ನಲ್ಲಿ ಒಟ್ಟಿಗೆ 12 ಮಂದಿ ಪಾಲ್ಗೊಳ್ಳಬಹುದು. ಆದರೆ ಸದ್ಯಕ್ಕೆ ವೈಸ್ ಕಾಲಿಂಗ್ ಇಲ್ಲ, ಡೆಸ್ಕ್‌ಟಾಪ್ ಆ್ಯಪ್ ಕೂಡಾ ಅಲ್ಲ. ಒಂದೇ ಮೊಬೈಲ್ ಅಥವಾ ನಂಬರ್‌ಗೆ ಸಪೋರ್ಟ್ ಮಾಡುತ್ತದೆ.






## ಟಿಪಿ ಲಿಂಕ್ ಟೆದರ್ ಆ್ಯಪ್

ಹಗುರ ನೆಟ್‌ವರ್ಕ್ ನಿರ್ವಹಣೆಗೆ ಇದು ನೆರವು ನೀಡುತ್ತದೆ. ಅದೂ ಟಿಪಿ ಲಿಂಕ್ ರೌಟರ್ ಹಾಗೂ ನೆಟ್‌ವರ್ಕ್ ಮೂಲಕ. ಇದರ ಮೂಲಕ ರೌಟರ್‌ಗೆ ಸಂಪರ್ಕಿಸಲಾದ ಯುಎಸ್‌ಬಿ ಡ್ರೈವ್‌ನಿಂದ ಬಹು ಮಾಧ್ಯಮ ಫೈಲ್‌ಗಳನ್ನು ವರ್ಗಾಯಿಸಬಹುದು. ಇದು ಆ್ಯಂಡ್ರಾಯ್ಡ್ ಹಾಗೂ ಐಒಎಸ್ ಆ್ಯಪ್ ಆಗಿದ್ದು ಕಾನ್‌ಫಿಗರ್ ಮಾಡುವುದು ಸುಲಭ. ಆದರೆ ಇದು ನಿಸ್ತಂತು ನೆಟ್‌ವರ್ಕ್ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಲಾಗಿನ್ ಆದ ನಂತರ ನೆಟ್‌ವರ್ಕ್ ಮ್ಯಾಪ್ ತೆರೆದುಕೊಳ್ಳುತ್ತದೆ. ಇದರಲ್ಲಿ ನಿಮ್ಮ ನೆಟ್‌ವರ್ಕ್‌ಗೆ ಸಂಪರ್ಕಿಸಲಾದ ಎಲ್ಲಾ ಸಾಧನಗಳು ಹಾಗೂ ರೌಟರ್ ಕಾಣುತ್ತವೆ. ಮ್ಯಾಪ್ ಮೇಲೆ ಕುಟ್ಟಿದರೆ ಐಪಿ ಅಡ್ರೆಸ್, ಮ್ಯಾಕ್ ಅಡ್ರೆಸ್, ಹೋಸ್ಟ್‌ನೇಮ್ ಎಲ್ಲದರ ವಿವರ ಕಾಣಿಸುತ್ತದೆ.

■ ಎಸ್. ತುಂಬೆ